**ಕರ್ನಾಟಕ ಸರ್ಕಾರ**

# ಕಾಲೇಜು ಶಿಕ್ಷಣ ಇಲಾಖೆಯ ನಡವಳಿಗಳು

**ವಿಷಯ: ನ್ಯಾಕ್ ಪ್ರಕ್ರಿಯೆಗೆ ಒಳಪಡುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.**

**ಉಲ್ಲೇಖ:**
1. ಸರ್ಕಾರಿ ಅನುದಾನ ಮಂಜೂರಾತಿ ಆದೇಶ ಸಂಖ್ಯೆ ಇಡಿ/91/ ಹೆಚ್‌ಪಿಸಿ/2022, ಬೆಂಗಳೂರು, ದಿನಾಂಕ: 22.02.2023.
2. ಸರ್ಕಾರಿ ಅನುದಾನ ಮಂಜೂರಾತಿ ಆದೇಶ ಸಂಖ್ಯೆ ಇಡಿ/91/ ಹೆಚ್‌ಪಿಸಿ/2022, ಬೆಂಗಳೂರು, ದಿನಾಂಕ: 02.01.2023.
3. ಸರ್ಕಾರದ ಅನುದಾನ ಬಿಡುಗಡೆ ಆದೇಶ ಸಂಖ್ಯೆ: ಇಡಿ 152 ಹೆಚ್‌ಪಿಸಿ 2022 ಬೆಂಗಳೂರು, ದಿನಾಂಕ : 25.07.2022.
4. ಸರ್ಕಾರಿ ಅನುದಾನ ಮಂಜೂರಾತಿ ಆದೇಶ ಸಂಖ್ಯೆ ಇಡಿ/91/ಹೆಚ್‌ಪಿಸಿ /2022, ಬೆಂಗಳೂರು, ದಿನಾಂಕ: 05.04.2022.
5. ಈ ಕಛೇರಿಯ ಸಮಸಂಖ್ಯೆಯ ಆದೇಶಗಳು ದಿನಾಂಕ: 08.08.2022 ಹಾಗೂ 19.01.2023.
6. ಸರ್ಕಾರದ ಪತ್ರ ಸಂಖ್ಯೆ: ಇಡಿ 111 ಹೆಚ್‌ಪಿಸಿ 2021 ದಿ: 01.02.2022.
7. ಅನುದಾನ ಕೋರಿ 06 ಪ್ರಾದೇಶಿಕ ಜಂಟಿ ನಿರ್ದೇಶಕರುಗಳ ವಿವಿಧ ದಿನಾಂಕಗಳ ಶಿಫಾರಸು ಪತ್ರಗಳು.

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ನ್ಯಾಕ್ ಮೌಲ್ಯಮಾಪನ/ ಮರುಮೌಲ್ಯಮಾಪನ ಪ್ರಕ್ರಿಯೆಗೆ ಒಳಪಡುವುದು ಕಡ್ಡಾಯವಿರುವ ಹಿನ್ನೆಲೆಯಲ್ಲಿ, ಮಾನ್ಯತಾ ಪ್ರಕ್ರಿಯೆಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡಲು ಉಲ್ಲೇಖ (4) ರ ಸರ್ಕಾರಿ ಆದೇಶದಲ್ಲಿ 2022-23 ರ ಸಾಲಿನಲ್ಲಿ "ರಾಷ್ಟ್ರೀಯ ಅಂಗೀಕೃತ ಪರಿಷತ್ತು"ಕಾರ್ಯಕ್ರಮದಡಿ, ಲೆಕ್ಕಶೀರ್ಷಿಕೆ: **2202-03-112-0-09-059** ರಲ್ಲಿ ರೂ. 140.00 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ. ಉಲ್ಲೇಖ (3) ರ ಸರ್ಕಾರಿ ಆದೇಶದಲ್ಲಿ ಮೊದಲ ಹಾಗೂ ಎರಡನೇ ಕಂತು ಸೇರಿ ಅನುದಾನದ ಮೊತ್ತ **ರೂ. 70.00 ಲಕ್ಷಗಳು** ಹಾಗೂ ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ ಮೂರನೇ ಕಂತಿನ ಅನುದಾನದ ಮೊತ್ತ **ರೂ. 35.00 ಲಕ್ಷಗಳು** ಬಿಡುಗಡೆಯಾಗಿದ್ದು, ನ್ಯಾಕ್ ಪ್ರಕ್ರಿಯೆಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ನ್ಯಾಕ್ ಸಂಸ್ಥೆಗೆ ಪಾವತಿಸಬೇಕಾದ ಐ.ಐ.ಕ್ಯೂ.ಎ, ಎಸ್.ಎಸ್.ಆರ್. ಶುಲ್ಕ, ಲಾಜಿಸ್ಟಿಕ್ ಶುಲ್ಕಗಳು ಮತ್ತು ಪೀರ್ ತಂಡದ ಭೇಟಿ ವೆಚ್ಚಕ್ಕಾಗಿ ಅನುದಾನವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಉಲ್ಲೇಖ(5)ರ ಈ ಕಛೇರಿಯ ಆದೇಶಗಳಲ್ಲಿ ಬಿಡುಗಡೆ ಮಾಡಲಾಗಿರುತ್ತದೆ.

ಪ್ರಸ್ತುತ, ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ, ನಾಲ್ಕನೇ ಕಂತಿನ ಮೊತ್ತ **ರೂ. 35.00 ಲಕ್ಷ**ಗಳು ಬಿಡುಗಡೆಯಾಗಿದ್ದು, ಹಿಂದೆ 2022-23 ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಉಳಿಕೆಯಾದ **ರೂ.2,259/- ಗಳು** ಸೇರಿ ಒಟ್ಟು **ರೂ.35,02,229/-ಗಳನ್ನು** ನ್ಯಾಕ್ ಪ್ರಕ್ರಿಯೆಗೆ ಒಳಪಟ್ಟಿರುವ/ ಒಳಪಡಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/ನ್ಯಾಕ್/02/ಅನು.ಬಿಡು/2022-23,ಬೆಂಗಳೂರು ದಿ: 13 .03.2023**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ ನ್ಯಾಕ್ ಮೌಲ್ಯಮಾಪನ / ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಬಿಡುಗಡೆ ಮಾಡಲು "ರಾಷ್ಟ್ರೀಯ ಅಂಗೀಕೃತ ಪರಿಷತ್ತು" ಕಾರ್ಯಕ್ರಮದಡಿ ಲೆಕ್ಕಶೀರ್ಷಿಕೆ-**2202-03-112-0-09-059** ರ ಅಡಿ ಯಲ್ಲಿ ನಾಲ್ಕನೇ ಕಂತಿನ ಅನುದಾನದ ಮೊತ್ತ **ರೂ. 35.00 ಲಕ್ಷಗಳು** ಬಿಡುಗಡೆಯಾಗಿದ್ದು, ಉಳಿಕೆಯಾದ

.......2

**ರೂ.2,259/- ಗಳು** ಸೇರಿ ಒಟ್ಟು **ರೂ.35,02,229/-ಗಳನ್ನು** ಪ್ರಸ್ತುತ ನ್ಯಾಕ್ ಮೌಲ್ಯಮಾಪನ / ಮರು ಮೌಲ್ಯಮಾಪನಕ್ಕೆ ಒಳಪಡುವ/ ಒಳಪಟ್ಟಿರುವ ಈ ಕೆಳಕಂಡ 29 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡಬೇಕಿರುತ್ತದೆ. ದಿ.: 01.12.2022 ರಂದು ನ್ಯಾಕ್ ಸಂಸ್ಥೆಯು ಹೊರಡಿಸಿರುವ ಸುತ್ತೋಲೆಯನ್ವಯ, ಲಾಜಿಸ್ಟಿಕ್ ಶುಲ್ಕವನ್ನು ರೂ.1,77,000/- ಇದ್ದುದನ್ನು ಪರಿಷ್ಕರಿಸಿ, ಹೆಚ್ಚುವರಿಯಾಗಿ ರೂ.59,000/- ಗಳನ್ನು ಸೇರಿಸಿ, ಒಟ್ಟು ರೂ. 2,36,000/- ಕ್ಕೆ ಹೆಚ್ಚಿಸಿರುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ, ದಿನಾಂಕ:01.12.2022 ರಿಂದ ಅನ್ವಯಿಸುವಂತೆ ಈ ಹಿಂದೆ ಅನುದಾನ ಬಿಡುಗಡೆ ಮಾಡಿದ 14 ಕಾಲೇಜುಗಳಿಗೆ ಹೆಚ್ಚುವರಿಯಾಗಿ ತಲಾ ರೂ. 59,000/- ಗಳನ್ನು ಬಿಡುಗಡೆ ಮಾಡಬೇಕಿರುತ್ತದೆ. ಇದರೊಂದಿಗೆ, ಉಲ್ಲೇಖ(7)ರ ಪ್ರಾದೇಶಿಕ ಜಂಟಿ ನಿರ್ದೇಶಕರುಗಳ ಶಿಫಾರಸು ಪತ್ರಗಳಲ್ಲಿ ಕೋರಿದಂತೆ ನ್ಯಾಕ್ ಮೌಲ್ಯಮಾಪನ / ಮರುಮೌಲ್ಯಮಾಪನ ಪ್ರಕ್ರಿಯೆಗೆ ಒಳಪಡುತ್ತಿರುವ 15 ಕಾಲೇಜುಗಳಿಗೆ ಭಾಗಶಃ ಅನುದಾನವನ್ನು ಬಿಡುಗಡೆ ಮಾಡಬೇಕಿರುತ್ತದೆ. ಅದಕ್ಕಾಗಿ ಈ ಆದೇಶ.

ಉಲ್ಲೇಖ (6) ರ ಸರ್ಕಾರಿ ಪತ್ರ ಸಂಖ್ಯೆ: **ಇಡಿ 111 ಹೆಚ್‌ಪಿಸಿ 2021 ದಿ: 01.02.2022** ರನ್ವಯ ನ್ಯಾಕ್ ಮೌಲ್ಯಮಾಪನ/ಮರುಮೌಲ್ಯಮಾಪನ ಶುಲ್ಕ ಪಾವತಿಸಲು ಮಾತ್ರ ಲೆಕ್ಕಶೀರ್ಷಿಕೆ: **2202-03-112-0-09-059** ರಿಂದ ಒದಗಿಸಿರುವ ಅನುದಾನವನ್ನು **CTS-8** ಮುಖಾಂತರ ಸೆಳೆದು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಐ.ಕ್ಯೂ.ಎ.ಸಿ. ಖಾತೆಗಳಿಗೆ ಬಿಡುಗಡೆ ಮಾಡಲು ಅನುಮತಿ ನೀಡಲಾಗಿದೆ.

| ಕ್ರ. ಸಂ | ಕಾಲೇಜಿನ ಹೆಸರು | ಡಿ.ಡಿ.ಓ ಸಂಖ್ಯೆ/ರಸಿಪಿಯಂಟ್ ಐ.ಡಿ. | ಐ.ಐ.ಕ್ಯೂ.ಎ ಶುಲ್ಕ (ರೂ.ಗಳಲ್ಲಿ) | ಎಸ್.ಎಸ್. ಆರ್. ಶುಲ್ಕ (ರೂ.ಗಳಲ್ಲಿ) | ಲಾಜಿಸ್ಟಿಕ್ ಶುಲ್ಕ (ರೂ.ಗಳಲ್ಲಿ) | ಪೀರ್ ತಂಡ ಭೇಟಿ ಗಾಗಿ ವಾಹನ ಬಾಡಿಗೆ,ಶಿಷ್ಟಾಚಾರ ಚಿತ್ರೀಕರಣ ಇತ್ಯಾದಿ (ರೂ.ಗಳಲ್ಲಿ) | ಒಟ್ಟು (ರೂ.ಗಳಲ್ಲಿ) |
|---|---|---|---|---|---|---|---|
| 1 | 2 | 3 | | | | | |
| 1 | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, **ಚಿಕ್ಕಬಳ್ಳಾಪುರ – 560123** | **1400360229** | - | - | 59000 | - | 59000 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಗುಡಿಬಂಡೆ – 574328** ಚಿಕ್ಕಬಳ್ಳಾಪುರ ಜಿ. | **1400413814** | - | - | 59000 | - | 59000 |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಬಸವನ ಬಾಗೇವಾಡಿ – 586 203.** | **1403210708** | - | - | 59000 | - | 59000 |
| 4 | ಶ್ರೀ ಮಲ್ಲಪ್ಪ ಯೇಗಪ್ಪ ಖ್ಯಾಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ತೆಲಸಂಗ – 591265, ಅಥಣಿ ತಾ.** | **1401357386** | - | - | 59000 | - | 59000 |
| 5 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಸಾವಳಗಿ - 586 126,** ಜಮಖಂಡಿ ತಾ. | **1403579160** | - | - | 59000 | - | 59000 |
| 6 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಜೊಯಿಡಾ – 581 186** | **1404499828** | - | - | 59000 | - | 59000 |
| 7 | ಬಿ.ಟಿ. ಚೆನ್ನಯ್ಯ ಗೌರಮ್ಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಸೋಮವಾರಪೇಟೆ – 571 236** | **1404495395** | - | - | 59000 | - | 59000 |
| 8 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಸರಗೂರು** | **1401326317** | - | - | 59000 | - | 59000 |
| 9 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಹನಗೋಡು–571105,** ಹುಣಸೂರು ತಾ. | **1403579051** | - | - | 59000 | - | 59000 |
| 10 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, **ಚಾಮರಾಜನಗರ** | **1404405094** | - | - | 59000 | - | 59000 |
| 11 | ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಕಬ್ಬಹಳ್ಳಿ–571319** ಗುಂಡ್ಲುಪೇಟೆ ತಾ. | **1403501121** | - | - | 59000 | - | 59000 |
| 12 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಮಳವಳ್ಳಿ – 571 430** | **1401320025** | - | - | 59000 | - | 59000 |

……3

| | | | | | | | |
|---|---|---|---|---|---|---|---|
| 13 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, **ಶಿವಮೊಗ್ಗ.** | **1404998032** | - | - | 59000 | - | 59000 |
| 14 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, **ಚಿತ್ರದುರ್ಗ** | **1404996086** | - | - | 59000 | - | 59000 |
| 15 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, **ಚಾಮರಾಜಪೇಟೆ, ಬೆಂಗಳೂರು.** | **1404401062** | 29500 | 118000 | 30500 | - | 178000 |
| 16 | ಶ್ರೀ ಚನ್ನಮಲ್ಲಪ್ಪ ಚನ್ನವೀರಪ್ಪ ಹೆಬ್ಬಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಗೊಳಸಂಗಿ – 586 216** | **1404436390** | 29500 | 118000 | 30500 | - | 178000 |
| 17 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, **ಹಾವೇರಿ** | **1403578441** | 29500 | 118000 | 30500 | - | 178000 |
| 18 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, **ಗದಗ** | **1403579154** | 29500 | 118000 | 30500 | - | 178000 |
| 19 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಸಿಂಧಗಿ – 586 128** | **1400380866** | 29500 | 118000 | 30500 | - | 178000 |
| 20 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಇಲಕಲ್ -587 125** | **1403336985** | 29500 | 118000 | 30500 | - | 178000 |
| 21 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಸುಲೇಪೇಟೆ–585324,** ಚಿಂಚೋಳಿ ತಾ. | **1404436392** | 29500 | 118000 | 30500 | - | 178000 |
| 22 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಔರಾದ್-585 326** | **1404490295** | 29500 | 118000 | 30500 | - | 178000 |
| 23 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಮೋಕ – 583 117,** ಬಳ್ಳಾರಿ ಜಿ. | **1404492827** | 29500 | 118000 | 30500 | - | 178000 |
| 24 | ಚಿಲುಕುರಿ ನಾಗೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಶ್ರೀರಾಮನಗರ-584 130,** ಗಂಗಾವತಿ ತಾ. | **1404436289** | 29500 | 118000 | 30500 | - | 178000 |
| 25 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಕುಷ್ಟಗಿ – 584 121** | **1400360290** | 29500 | 118000 | 30500 | - | 178000 |
| 26 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ನಾಪೋಕ್ಲು,** ಮಡಿಕೇರಿ ತಾ. | **1405134811** | 29500 | 118000 | 30500 | - | 178000 |
| 27 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಮೊಸಳೆ ಹೊಸಹಳ್ಳಿ – 573 212,** ಹಾಸನ ತಾ.ಜಿ. | **1403578889** | 29500 | 118000 | 30500 | - | 178000 |
| 28 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಯಳಂದೂರು – 571 441.** | **1403578911** | 29500 | 118000 | 30500 | - | 178000 |
| 29 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, **ಯಗಟಿ – 577 040.** ಕಡೂರು ತಾ. | **1404393662** | 29500 | 118000 | 36759 | - | 184259 |
| | **ಒಟ್ಟು** | | **442500** | **1770000** | **1289759** | | **3502259** |

**ವಿವರ :-**

- ಮೇಲ್ಕಂಡ ಪಟ್ಟಿಯಲ್ಲಿನ ಕ್ರಮ ಸಂಖ್ಯೆ 1 ರಿಂದ 14 ರವರೆಗಿನ ಕಾಲೇಜುಗಳಿಗೆ ದಿನಾಂಕ: 01.12.2022 ರ ನ್ಯಾಕ್ ಸಂಸ್ಥೆಯ ಸುತ್ತೋಲೆಯನ್ವಯ ಹೆಚ್ಚಳವಾಗಿರುವ ಲಾಜಿಸ್ಟಿಕ್ ಶುಲ್ಕದ ಮೊತ್ತ ರೂ.59,000/- ಗಳನ್ನು ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.
- ಕ್ರಮ ಸಂಖ್ಯೆ: 15 ರಿಂದ 28 ರವರೆಗಿನ ಕಾಲೇಜುಗಳ ಪೈಕಿ ಪ್ರತಿ ಕಾಲೇಜಿಗೆ ರೂ. 4,33,500/- ಗಳನ್ನು ಬಿಡುಗಡೆ ಮಾಡಬೇಕಿದ್ದು, ಅನುದಾನದ ಕೊರತೆಯಿಂದಾಗಿ ರೂ. 1,78,000/- ಗಳನ್ನು, ಅದೇ ರೀತಿ ಕ್ರಮ ಸಂಖ್ಯೆ: 29 ರಲ್ಲಿನ ಕಾಲೇಜಿಗೆ ರೂ. 1,84,259/- ಗಳನ್ನುಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.
- ಕ್ರಮ ಸಂಖ್ಯೆ 15 ರಿಂದ 28 ರವರೆಗಿನ ಕಾಲೇಜುಗಳಿಗೆ ಉಳಿಕೆ ಮೊತ್ತವಾದ ರೂ.2,55,500/-ಗಳನ್ನು ಹಾಗೂ ಕ್ರಮ ಸಂಖ್ಯೆ: 29 ರ ಕಾಲೇಜಿಗೆ ಉಳಿಕೆ ಮೊತ್ತವಾದ ರೂ.2,49,241/- ಗಳನ್ನು 2023-24ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರಾಗುವ ಅನುದಾನದಲ್ಲಿ ಬಿಡುಗಡೆ ಮಾಡಲಾಗುವುದು.

.......4

**ಷರತ್ತುಗಳು:-**

1. **ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ (ಕೆ.ಟಿ.ಪಿ.ಪಿ) ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.**
2. **ಈ ವೆಚ್ಚವನ್ನು ಎಲ್ಲಾ ಪ್ರಚಲಿತ ನಿಯಮಗಳನ್ನು ಪಾಲಿಸಿ ಭರಿಸುವುದು.**
3. **ಈ ಅನುದಾನವನ್ನು ನ್ಯಾಕ್ ಮೌಲ್ಯಮಾಪನ / ಮರುಮೌಲ್ಯಮಾಪನ ಪ್ರಕ್ರಿಯೆಗಳಿಗೆ ಮಾತ್ರ ಬಳಸತಕ್ಕದ್ದು.**
4. **ಬಿಡುಗಡೆ ಮಾಡಲಾದ ಅನುದಾನದ ಖರ್ಚು-ವೆಚ್ಚಗಳನ್ನು ಕಡ್ಡಾಯವಾಗಿ ಲೆಕ್ಕ ತಪಾಸಣೆಗೆ ಒಳಪಡಿಸತಕ್ಕದ್ದು.**
5. **ಅನುದಾನವು ಕಾಲೇಜಿನ ಐಕ್ಯೂಎಸಿ ಖಾತೆಯನ್ನು ಹೊರತುಪಡಿಸಿ ಇತರೆ ಖಾತೆಗೆ ಜಮೆಯಾಗಿದ್ದಲ್ಲಿ, ಕೂಡಲೇ ಐಕ್ಯೂಎಸಿ ಖಾತೆಗೆ ಆ ಮೊತ್ತವನ್ನು ವರ್ಗಾಯಿಸಿಕೊಂಡು, ನ್ಯಾಕ್ ಸಂಸ್ಥೆಗೆ ನಿಯಮಾನುಸಾರ ಪಾವತಿಸತಕ್ಕದ್ದು.**
6. **ಬಿಡುಗಡೆ ಮಾಡಲಾದ ಅನುದಾನದ ಬಳಕೆಯ ಬಗ್ಗೆ ಕರ್ನಾಟಕ ಆರ್ಥಿಕ ಸಂಹಿತೆ, ನಿಯಮ 161 ರನ್ವಯ ನಿಗದಿತ ನಮೂನೆಯಲ್ಲಿಯೇ ಹಣ ಬಳಕೆ ಪ್ರಮಾಣಪತ್ರವನ್ನು ಸಿದ್ಧಪಡಿಸಿ, ನ್ಯಾಕ್ ಪ್ರಕ್ರಿಯೆ ಪೂರ್ಣಗೊಂಡ ತತ್‌ಕ್ಷಣವೇ ಕೇಂದ್ರ ಕಛೇರಿಯ ಎಸ್.ಕ್ಯೂ.ಎ.ಸಿ. ವಿಭಾಗಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಪ್ರಾಂಶುಪಾಲರೇ ಹೊಣೆಗಾರರಾಗುತ್ತಾರೆ.**
7. **ಬ್ಯಾಂಕ್ ಖಾತೆಗೆ ಜಮೆಯಾದ ಬಡ್ಡಿಯನ್ನು ಸದರಿ ವರ್ಷವೇ ಸರ್ಕಾರಕ್ಕೆ ಲೆಕ್ಕಶೀರ್ಷಿಕೆ: 0202-01-103-1-02-000 ರಡಿಯಲ್ಲಿ ಉಪ ಉದ್ದೇಶದ ಹೆಸರಿನ ಕಾಲಂನಲ್ಲಿ - ಇತರೆ (others) ನ್ನು ಆಯ್ಕೆ ಮಾಡಿಕೊಂಡು ಸರ್ಕಾರಕ್ಕೆ ಪಾವತಿಸುವುದು.**

ಈ ಮೇಲ್ಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿ, ಬಿಡುಗಡೆಯಾದ ಅನುದಾನವನ್ನು ನ್ಯಾಕ್ ಸಂಬಂಧಿತ ಉದ್ದೇಶಗಳಿಗೆ ಮಾತ್ರ ನಿಗದಿತ ಅವಧಿಯೊಳಗೆ ಸದ್ಬಳಕೆ ಮಾಡಿಕೊಳ್ಳುವಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಈ ಷರತ್ತುಗಳು ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರುಗಳನ್ನು/ಕಾಲೇಜುಗಳ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

**ಆಯುಕ್ತರು**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ:**

1. **ಮೇಲ್ಕಂಡ 29 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ** – ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ

**ಪ್ರತಿಗಳು :**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು/ಮೈಸೂರು/ಶಿವಮೊಗ್ಗ/ಧಾರವಾಡ/ಕಲ್ಬುರ್ಗಿ/ಮಂಗಳೂರು - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ಮಾನ್ಯ ಆಯುಕ್ತರು/ಮಾನ್ಯ ನಿರ್ದೇಶಕರ ಆಪ್ತ ಶಾಖೆಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
4. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ನೋಡಲ್ ಅಧಿಕಾರಿಗಳು-ರಾಜ್ಯ ಗುಣಮಟ್ಟ ಭರವಸಾ ಕೋಶ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
6. ಮ್ಯಾನೇಜರ್/ಅಧೀಕ್ಷಕರು, ಯೋಜನಾ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
7. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
8. ಕಛೇರಿ ಪ್ರತಿ.